ಆ ಸಂಬಂಧಪಟ್ಟ ಜಿಲ್ಲೆಯ ಎಸ್.ಪಿ. ಗಳು ಎಂದು ಮಾಡಿದ್ದರು. ಇವತ್ತು ಅವರಿಗೆ ಜವಾಬ್ದಾರಿಯನ್ನು ಕೊಡಿ. ಇವತ್ತು ಏನು ಪರಿಸ್ಥಿತಿ ಬಂದಿದೆ ಎ.ಡಿ.ಜಿ ಯವರಿಗೆ ಹೇಳಿದರೆ ಎ.ಡಿ.ಜಿ ಯವರ ಮಾತು ಕೇಳತಕ್ಕಂಥ ಪರಿಸ್ಥಿತಿಯಲ್ಲಿ ಅವರು ಇಲ್ಲ. ಹೋಮ್ ಮಿನಿಸ್ಟರ್ ಕಡೆಯಿಂದ ಆದೇಶ ಹೋದರೂ ಕೇಳತಕ್ಕಂಥ ಪರಿಸ್ಥಿತಿ ಇಲ್ಲ. ಸರ್ಕಾರದ ಭಯ ಅವರ ಮೇಲೆ ಇಲ್ಲ. ಈ ರೀತಿ ಇರುವಾಗ ಇಂಥಾದ್ದನ್ನು ನಾನು ಅನೇಕ ಹೇಳಬಹುದು, ಅವುಗಳನ್ನು ನಾನು ಡಿಮ್ಯಾಂಡ್ಸ್ ಚರ್ಚೆಗೆ ಬಂದಾಗ ಹೇಳುತ್ತೇನೆ. ಈ ಒಂದು ವಿಚಾರದಲ್ಲಿ ಮಾನ್ಯ ಮಂತ್ರಿಗಳು ತಕ್ಷಣ ಅವರನ್ನು ಅಮಾನತ್ತಿನಲ್ಲಿಡಬೇಕು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಏನು ಪರಿಹಾರ ಕೊಡಬೇಕೋ ಅದನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ :- ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಸಿ.ಓ.ಡಿ ಗೆ ವಹಿಸಿದರೆ ಬಹಳ ಉತ್ತಮ. ಅಲ್ಲಿ ಎರಡೂ ಸೈಡ್‌ನಿಂದ ಗಲಾಟೆಯಾಗಿದೆ. ಅಲ್ಲಿ ಇಬ್ಬರೂ ಸಹ ಒಂದೇ ಕೋಮಿಗೆ ಸೇರಿದವರಾಗಿದ್ದಾರೆ. ಅದ್ದರಿಂದ ಸಿ.ಓ.ಡಿ ಗೆ ರೆಫರ್ ಮಾಡಿದರೆ ಉತ್ತಮ ಎಂದು ನನ್ನ ಅಭಿಪ್ರಾಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೇ, ಅಯಿತು, ಇದನ್ನು ಸಿ.ಓ.ಡಿ ಗೆ ಒಪ್ಪಿಸಿಬಿಡಿ ಎಂದು ಹೇಳಿದ್ದಾರೆ ನಾನು ಸಿ.ಓ.ಡಿ ಗೆ ವಹಿಸಿಕೊಡುತ್ತೇನೆ. ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕಾದರೂ ಸಹ ಸಿ.ಓ.ಡಿ ರಿಪೋರ್ಟ್ ಬರುವರೆಗೂ ಸಸ್ಪೆಂಡ್ ಮಾಡುವುದಕ್ಕೆ ಬರುವುದಿಲ್ಲ. ಒಂದೇ ಕೋಮಿನವರ ಜಗಳ ಇದೆ ಎನ್ನತಕ್ಕಂಥಾದ್ದನ್ನು ಅವರು ಹೇಳಿದ್ದಾರೆ. ಆ ಮತಕ್ಷೇತ್ರದ ಶಾಸಕರು ಆ ರೀತಿ ಹೇಳುತ್ತಿದ್ದರೆ. ನಾನು ತಕ್ಷಣ ಇದನ್ನು ಸಿ.ಓ.ಡಿ ಗೆ ವಹಿಸಿಕೊಡುತ್ತೇನೆ. ಪೆಂಡಿಂಗ್ ಎನ್‌ಕ್ವೈರಿ ಇಟ್ಟು ಸಬ್ ಇನ್ಸ್‌ಪೆಕ್ಟರ್‌ಗೆ ಸಸ್ಪೆಂಡ್ ಮಾಡುತ್ತೇನೆ. ಆದರೆ ಇನ್ನೊಂದು ಮಾತು ಹೇಳಿದರು ಅವರು, ಶ್ರೀ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಎಸ್.ಪಿ ಮತ್ತು ಡಿ.ಸಿ ಯವರನ್ನು ಜವಾಬ್ದಾರರನ್ನಾಗಿ ಮಾಡಿದ್ದರು ಅಂತ ಆ ಸರ್ಕಾರಿ ಆದೇಶವನ್ನು ನಾನು ತರಿಸುತ್ತೇನೆ. ಆ ಕಾಲದಲ್ಲಿ ಇಶ್ಯೂ ಆಗಿದ್ದು ಬಹುಶಃ ಈ ಸಂದರ್ಭದಲ್ಲಿ ಸಹ ಅದು ಸೂಕ್ತವಾಗಿದೆ ಎಂದು ಕಂಡರೆ ಖಂಡಿತವಾಗಿ ಅದೇ ಸುತ್ತೋಲೆಯನ್ನು ಕಳುಹಿಸಿ ಎಸ್.ಪಿ ಮತ್ತು ಡಿ.ಸಿ ಯವರನ್ನು ಜವಾಬ್ದಾರರನ್ನಾಗಿ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇನೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

(6) ಮುಖ್ಯಮಂತ್ರಿಗಳವರಿಂದ ಹೇಳಿಕೆ ಕಾವೇರಿ ನದಿ ನೀರಿನ ಬಗ್ಗೆ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸಿಂಧ್ಯಾರವರು ಮತ್ತು ಇತರೇ ಸದಸ್ಯರುಗಳು ಕಾವೇರಿ ನದಿ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಹೆಚ್ಚು ವಿವರಗಳನ್ನು ನಾಳೆ ತಮ್ಮಗಳೆಲ್ಲರ ಸಭೆ ಕರೆದು ಆ ಸಭೆಯ ಮುಂದೆ ಎಲ್ಲಾ ವಿವರಗಳನ್ನು ಒದಗಿಸಿ ಆ ನಂತರ ಸಭೆಯಲ್ಲಿ ಏನು ಪ್ರಸ್ತಾಪ ಮಾಡಬಹುದು ಎನ್ನತಕ್ಕಂಥಾದ್ದರ ಬಗ್ಗೆ ಹೆಚ್ಚು ಮಾಹಿತಿಯನ್ನು ನಾವು ನೀರು ಸೇರಿದ ಮೇಲೆ ಚರ್ಚೆ ಮಾಡೋಣ. ಸರ್ವಪಕ್ಷಗಳ ಸಭೆಯನ್ನು ಮಾಡೋಣ.